ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2784/2021

ಚಾಸಾ:3 ಪ್ರಾಸಾ:3

ದಿನಾಂಕ: 17.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸೀತಾರಾಮ ದೇವಾಡಿಗ |
| ತಂದೆಯ ಹೆಸರು | : | ತಿಮ್ಮ ದೇವಾಡಿಗ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಶಾಮೀಯಾನ |
| ವಾಸ ಸ್ಥಳ | : | ಉಳ್ತೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ: 14-08-2021 ರಂದು ಉಳ್ತೂರಿನಲ್ಲಿ ಅಪಘಾತವಾಗಿದ್ದ ಸ್ಥಳದಲ್ಲಿ ಪೊಲೀಸರು ಹಾಜರು ಇರುವಂತೆ ಸೂಚಿಸಿದ್ದು ನಾನು ಮತ್ತು ಚಾಸಾ-2 ರವರು ಹಾಜರು ಇದ್ದು, ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 5-30 ರಿಂದ 6-15ರವರೆಗೂ ಜರುಗಿಸಿ ನಕ್ಷೆ ತಯಾರಿಸಿ ಪೋಟೋ ತೆಗೆದು ನಮ್ಮ ಸಹಿಗಳನ್ನು ಪಡೆದಿರುತ್ತಾರೆ.

ಅದೇ ದಿನ ಸಂಜೆ 6-30ರ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ಇದ್ದು, ಪೊಲೀಸರು 407 ಮತ್ತು ದ್ವಿ ಚಕ್ರ ವಾಹನವನ್ನು ವಶಕ್ಕೆ ಪಡೆಯುವ ವೇಳೆಗೆ ಹಾಜರು ಇದ್ದು, ವಾಹನವನ್ನು ಚಾಸಾ-1 ರವರು ಗುರುತಿಸಿದ್ದು, ಪಂಚನಾಮೆಯನ್ನು ಸಂಜೆ 6-30 ರಿಂದ 7ರವರೆಗೂ ಜರುಗಿಸಿ ವಶಕ್ಕೆ ಪಡೆದು ಪೋಟೋ ತೆಗೆದು ಸಹಿ ಪಡೆದಿರುತ್ತಾರೆ. ಅಪಘಾತದಿಂದ ಸೃಜನ್ ಶೆಟ್ಟಿ ಮೋಟಾರು ಸೈಕಲ್ ಸವಾರ ಮೃತಪಟ್ಟಿರುವ ಬಗ್ಗೆ ನನಗೆ ತಿಳಿದಿರುತ್ತದೆ.

ಸಾಕ್ಷಿಗೆ ನಿಪಿ-2 ರಿಂದ 11ನ್ನು ತೋರಿಸಲಾಗಿ, ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-2 ರಿಂದ 4ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-2(ಸಿ) ರಿಂದ ನಿಪಿ-4(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**